# ಕೃಷ್ಣ ಮಾಸಡಿ



ಲೇಖಕ, ಪತ್ರಕರ್ತ, ನಿರ್ದೇಶಕ ಕೃಷ್ಣ ಮಾಸಡಿ ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಮಾಸಡಿಯವರು. ಕತೆಗಳ ಬರವಣಿಗೆಯ ಜೊತೆಗೆ ಅವರು ದೀರ್ಘಕಾಲ ಸಾಕ್ಷ್ಯಚಿತ್ರ ಹಾಗೂ ಸಿನಿಮಾಗಳ ನಿರ್ದೇಶನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರಿಗೆ ಹೆಸರು ತಂದುಕೊಟ್ಟದ್ದು ಯು.ಆರ್. ಅನಂತಮೂರ್ತಿ ಅವರ ಕಾದಂಬರಿ 'ಅವಸ್ಥೆ' ಆಧಾರಿತ ಅದೇ ಹೆಸರಿನ ಸಿನಿಮಾ. ಅದು ಕೃಷ್ಣ ಮಾಸಡಿ ಅವರ ಕಸುಬುದಾರಿಕೆ, ಪ್ರತಿಭೆಯನ್ನು ತೋರುವ ಚಿತ್ರವಾಗಿದೆ. ಮೊದಲ ಬಾರಿಗೆ ಕನ್ನಡದ ರಾಜಕೀಯ, ಸಾಂಸ್ಕೃತಿಕ ವ್ಯಕ್ತಿಗಳು ಈ ಸಿನಿಮಾದಲ್ಲಿ ನಟಿಸಿದ್ದರು. ಅನಂತನಾಗ್, ನಾಟಕಕಾರ ಬಿ.ವಿ. ಕಾರಂತ್, ಎಂ. ಭಕ್ತವತ್ಸಲ, ಮಂತ್ರಿಗಳಾದ ಅಬ್ದುಲ್ ನಜೀರ್‌ಸಾಬ್, ಡಿ.ಬಿ. ಚಂದ್ರೇಗೌಡ, ಬಿ.ಕೆ. ಚಂದ್ರಶೇಖರ್ ಮತ್ತು ಮುಂದೆ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲ್ ಹಾಗೂ ಉಪಮುಖ್ಯಮಂತ್ರಿಗಳಾದ ಎಂ.ಪಿ. ಪ್ರಕಾಶ್ ಅದರಲ್ಲಿ ನಟಿಸಿದ್ದರು. ಕರ್ನಾಟಕದ ಸಮಾಜವಾದಿ ರಾಜಕಾರಣದ ಚಿತ್ರಣವಿದ್ದ ಅದು ಸಮಾಜವಾದಿಯೊಬ್ಬನ ವೈಯಕ್ತಿಕ ಬದುಕಿನ ಪದರಗಳನ್ನು ತೆರೆದಿಡುತ್ತದೆ. ಈ ಸಿನಿಮಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶಿತವಾಗಿದೆ.

'ನಂಬಿಕೆಗಳು' ಅವರ ನಿರ್ದೇಶನದ ಎರಡನೇ ಸಿನಿಮಾ. ಅದರಲ್ಲಿ ಅನಂತನಾಗ್, ತಾರಾ, ಬಿ. ಜಯಶ್ರೀ, ಜಿ.ವಿ. ಶಿವಾನಂದ್, ಕೋಣಂದೂರು ಲಿಂಗಪ್ಪ ಮುಂತಾದವರು ನಟಿಸಿದ್ದರು. ಎಸ್. ರಾಮಚಂದ್ರ ಛಾಯಾಗ್ರಹಣ, ವಿಜಯಭಾಸ್ಕರ್ ಸಂಗೀತ ಅದಕ್ಕಿತ್ತು. 'ಬೂತ', 'ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ', 'ಗ್ಯಾನಿ ಮತ್ತು ಗುಲಾಬಿ' ಅವರ ಕತೆಗಳ ಸಂಕಲನಗಳಾಗಿವೆ. 'ನಂಬಿಕೆಗಳು', 'ವೃತ್ತ' ಅವರ ಕಾದಂಬರಿಗಳಾದರೆ, 'ಸ್ವರ್ಗದ ಬಣ್ಣ' ಅವರ ಲೇಖನಗಳ ಸಂಗ್ರಹವಾಗಿದೆ. 30ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳನ್ನು, 'ಜೇನುಗೂಡು' ಎಂಬ 39 ದೂರದರ್ಶನ ಸರಣಿಗಳು, ಯು.ಆರ್. ಅನಂತಮೂರ್ತಿ ಅವರ ಕಾದಂಬರಿ 'ಭಾರತೀಪುರ' ಆಧಾರಿತ ಅದೇ ಹೆಸರಿನ 13 ದೂರದರ್ಶನ ಸರಣಿಗಳನ್ನು ಕೃಷ್ಣ ಮಾಸಡಿ ನಿರ್ದೇಶಿಸಿದ್ದಾರೆ.

ನಡೆಯುತ್ತಿದ್ದರಿಂದ ಮತ್ತು ಆಗಾಗ ಅವನು ಓಡಿಹೋಗುತ್ತಿರುವಾಗ ಬುಡದಲ್ಲೇ ಬಿದ್ದು ಮೊಣಕಾಲು ಮಂಡಿಗಳು ಸದಾ ಕೀವು, ರಕ್ತಗಳಿಂದ ಕಂಗೊಳಿಸುತ್ತಿದ್ದವು. ಎರಡುಗಂಟೆ ಸಿನಿಮಾದಲ್ಲಿ ಚಕ್ಕಲು ಬಕ್ಕಲು ಹಾಕಿ ಕೂತಿದ್ದರಿಂದ ಗ್ಯಾನಿಯ ಮೊಣಕಾಲು ಹಿಡಿದುಕೊಂಡು ವಿಚಿತ್ರ ಬಾಧೆ ಕೊಡಲು ತೊಡಗಿದ್ದವು. ಸೇಕ್ರಣ್ಣ ಸೇಕ್ರಣ್ಣ ಎನ್ನುತ್ತಾ ಅಯ್ಯಯ್ಯೋ ಅನ್ನತೊಡಗಿದ್ದರಿಂದ ಸೇಕ್ರಣ್ಣ ಗ್ಯಾನಿಯ ಪುಸ್ತಕದ ಚೀಲದ ಸಹಿತ ಅವನನ್ನು